# ಕುವೆಂಪು ವಿಶ್ವವಿದ್ಯಾಲಯ

Accredited by NAAC with "A" Grade, Ranked 73rd Place in NIRF-2019 & 45th Place at National Level SCIMAGO Ranking

ಕಾಲೇಜು ಅಭಿವೃದ್ಧಿ ಪರಿಷತ್ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451

ದೂರವಾಣಿ : 08282 – 256301–256308 ವೆಬ್‌ಸೈಟ್ : www.kuvempu.ac.in ಇ–ಮೇಲ್ :cdckuvempu@gmail.com


ಸಂಖ್ಯೆ:ಕುವಿ:ಸಿಡಿಸಿ–1: 439 :2023–24 ದಿನಾಂಕ:03/11/2023

## ಸುತ್ತೋಲೆ

ವಿಷಯ:– 2024–25 ನೇ ಸಾಲಿನ ಕಾಲೇಜುಗಳ ಸಂಯೋಜನೆ ಪ್ರಕ್ರಿಯೆ ಕುರಿತು.

ಉಲ್ಲೇಖ:– ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಪರಿಷ್ಕೃತ ಪತ್ರ ಸಂಖ್ಯೆ: ಕರಾಉಶಿಪ/109/ಸಂಯೋಜನೆ ಪ್ರಕ್ರಿಯೆ/2023–24/737/ ದಿನಾಂಕ 27–10–2023.

------

ಉಲ್ಲೇಖ (1) ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇವರ ಪತ್ರದ ಮೇರೆಗೆ, 2024–25ನೇ ಸಾಲಿನ ಕಾಲೇಜುಗಳ ಸಂಯೋಜನೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಅಹ್ವಾನಿಸಿ, KSU Act 2000 ಪ್ರಕರಣ 59(10) ರ ಅನ್ವಯ ಸಂಯೋಜನೆ ಪ್ರಕ್ರಿಯೆಗಳನ್ನು ಮುಗಿಸಿ 31ನೇ ಮಾರ್ಚ್ 2024ರೊಳಗಾಗಿ ರಾಜ್ಯ ಸರ್ಕಾರಕ್ಕೆ ಅನುಮತಿಗಾಗಿ ಕಳುಹಿಸಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಸಂಯೋಜಿತ ಎಲ್ಲಾ ಸ್ನಾತಕ : ಸ್ನಾತಕೋತ್ತರ : ಶಿಕ್ಷಣ ಕಾಲೇಜುಗಳು 2024–25ನೇ ಸಾಲಿನ ಸಂಯೋಜನೆಗೆ ಸಂಬಂಧಿಸಿದಂತೆ ಕಳೆದ ಸಾಲಿನಂತೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು, ಅರ್ಜಿಯ ಪ್ರಕಾರ ಕ್ರಮಬದ್ಧವಾಗಿ ದಾಖಲಾತಿಗಳನ್ನು ಇಟ್ಟುಕೊಳ್ಳಲು ಮತ್ತು 2023–24ನೇ ಸಾಲಿನಲ್ಲಿ ಸ್ಥಳೀಯ ತಪಾಸಣ ಸಮಿತಿಯು ಸೂಚಿಸಿರುವ ಮಾನದಂಡಗಳನ್ನು ಪೂರೈಸಿರತಕ್ಕದ್ದು ಹಾಗೂ ಸ್ಥಳೀಯ ತಪಾಸಣ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆಗೆ ಒದಗಿಸಲು ಸಿದ್ದತೆ ಮಾಡಿಕೊಳ್ಳಲು ತಿಳಿಸಲಾಗಿದೆ.

ವೇಳಾ ಪಟ್ಟಿ / ಶುಲ್ಕ ಮತ್ತಿತರ ಮಾಹಿತಿಗಳ ಕುರಿತು ಸರ್ಕಾರದಿಂದ ಮಾಹಿತಿ ಬಂದ ಕೂಡಲೇ ತಿಳಿಸಲಾಗುವುದು.

ಆದೇಶಾನುಸಾರ,

ನಿರ್ದೇಶಕರು
ಕಾಲೇಜು ಅಭಿವೃದ್ಧಿ ಪರಿಷತ್
ಕುವೆಂಪು ವಿಶ್ವವಿದ್ಯಾನಿಲಯ,
ಶಂಕರಘಟ್ಟ–577 451.

ಗೆ :

**ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಕಾಲೇಜುಗಳು ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳು.**

**ಪ್ರತಿಗಳು :**

1) ಸಂಯೋಜನಾಧಿಕಾರಿ, ಯು.ಸಿ.ಸಿ.ಎಫ್., ಮತ್ತು ಐ.ಟಿ. ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ. – **ಸದರಿ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.**
2) ಸಿಡಿಸಿ–2, 3, ವಿಷಯ ನಿರ್ವಾಹಕರು, ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3) ಕಛೇರಿ ಪ್ರತಿ.